# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No.258/2013
CW-17 PW-11

ಹೆಸರು : ಶಿವಶಂಕರ ಹೆಚ್.ಜೆ.

ತಂದೆ ಹೆಸರು : ಹೆಚ್, ಜಯರಾಮಯ್ಯ

ವಯಸ್ಸು : 61 ವರ್ಷ

ಉದ್ಯೋಗ : ನಿವೃತ್ತ ಪೊಲೀಸ ಇನ್ಸಪೆಕ್ಟರ್ ಮಡಿಕೇರಿ.

ವಾಸ ಸ್ಥಳ : ಬೆಂಗಳೂರು.

---

**<u>ಪ್ರಮಾಣವಚನ ಭೋಧಿಲಾಯಿತು. ದಿಃ 01.07.2024</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ನಾನು ವಾಡಿ ಪೊಲೀಸ ಠಾಣೆಯಲ್ಲಿ ಜನೆವರಿ ೨೦೦೫ ರಿಂದ ೧೩.೦೭.೨೦೦೬ರ ವರೆಗೆ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: ೨೧-೦೯-೨೦೦೫ರಂದು ಸಂಜೆ ೪-೩೦ರ ಸಮಯದಲ್ಲಿ ಚಾಸಾ-೧ರವರು ಠಾಣೆಗೆ ಹಾಜರಾಗಿ ಒಂದು ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ಒಂದು ಪ್ರಥಮ ವರ್ತಮಾನ ವರದಿಯನ್ನು ತಯ್ಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಚಾಸಾ-೧ ರವರು ದೂರಿನ ಜೊತೆಗೆ ಉಲ್ಲೇಖ-೩ ಮತ್ತು ಕೆಲವೊಂದು ದಾಖಲಾತಿಗಳನ್ನು ಹಾಜರುಪಡಿಸಿದ್ದರು.

ದಿನಾಂಕ: ೦೩-೧೧-೨೦೦೫ರಂದು, ೦೫-೧೨-೨೦೦೫ರಂದು ಮತ್ತು ದಿನಾಂಕ: ೦೧-೦೬-೨೦೦೬ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ಪಂಚಾಯತ ಕಛೇರಿ, ಕಲಬುರಗಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತ ದಾಖಲಾತಿಗಳನ್ನು ಮತ್ತು ತನಿಖೆಗೆ ಸಹಕರಿಸುವಂತೆ ಅಭಿಯಂತರರನ್ನು ವಿಚಾರಣೆಗಾಗಿ ಕಳುಹಿಸಿಕೊಡುವಂತೆ ಮನವಿಯನ್ನು ಮಾಡಿಕೊಂಡಿದ್ದೇನು.

ಈ ಪ್ರಕರಣದ ಆರೋಪಿಯು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿದ್ದು, ಆತನನ್ನು ದಸ್ತಗಿರಿ ಮಾಡಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ನಂತರ ಈ ಪ್ರಕರಣದ ತನಿಖೆಯನ್ನು ನಾನು ಚಾಸಾ-೧೮ ರವರಿಗೆ ಮುಂದಿನ ತನಿಖೆಗಾಗಿ ನಾನು ವರ್ಗಾವಣೆಯಾಗಿದ್ದರಿಂದ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿಶಾನೆ ಪಿ-೧ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-೧(ಬಿ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ-೧೨ ಎಂದು, ಸಹಿಗಳನ್ನು ನಿಶಾನೆ ಪಿ-೧೨(ಎ) ಮತ್ತು ೧೨(ಬಿ) ಎಂದು, ಸಾಕ್ಷಿಯು ೩ ಮನವಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಶಾನೆ ಪಿ-೧೩ ರಿಂದ ನಿಶಾನೆ ಪಿ-೧೫ ಎಂದು, ಸಹಿಗಳನ್ನು ನಿಶಾನೆ ಪಿ-೧೩(ಎ), ೧೪(ಎ) ಮತ್ತು ೧೫(ಎ) ಎಂದು ಗುರುತಿಸಲಾಯಿತು.

ನಾನು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಸಿ.ಬಿ.ಎ. ವಕೀಲರಿಂದ -</u>**

ಸದರಿ ದಿನ ಚಾಸಾ-೧ ರವರು ಈ ಪ್ರಕರಣದ ಆರೋಪಿಯ ವಿರುದ್ಧ ಮಾತ್ರ ದೂರನ್ನು ನೀಡಲು ಬಂದಿದ್ದರು. ನಾನು ಚಾಸಾ-೧ ರವರೊಂದಿಗೆ ಸೇರಿಕೊಂಡು ಆರೋಪಿಗೆ ತೊಂದರೆ ನೀಡಲು ಒಂದು ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ತಯ್ಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನಿಶಾನೆ ಪಿ-೧೩ ರಿಂದ ೧೫ರಂತೆ ಯಾವುದೇ ಮನವಿಗಳನ್ನು ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಇವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.